**ಸಾಕ್ಷಿಯನ್ನು ದಿಃ 11.11.2024 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ ಜಿ ಆರ್ ವಕೀಲರಿಂದ.**

ನಾನು ಎಸ್ ಎಸ್ ಎಲ್ ಸಿ ಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿ ಮತ್ತು ನಾವು ಚಿಕ್ಕಪ್ಪ – ದೊಡ್ಡಪ್ಪನವರುಗಳ ಮಕ್ಕಳು. ಈ ದಾವೆಗೆ ವಾದಿಗಳು ಮಾಹಿತಿ ನೀಡಿರುತ್ತಾರೆ. ನನ್ನ ತಾತನ ಹೆಸರು ಬೂಕೇಗೌಡ ಅಲಿಯಾಸ್ ಬೂಕಪ್ಪ. ಬೂಕೇಗೌಡ ಅಲಿಯಾಸ್ ಬೂಕಪ್ಪ ರವರಿಗೆ ಮೂರು ಜನ ಗಂಡು ಮಕ್ಕಳು, 3 ಜನ ಹೆಣ್ಣು ಮಕ್ಕಳು. ಅವರೆಲ್ಲರೂ ತೀರಿಕೊಂಡಿರುತ್ತಾರೆ. ವಾದಿಗಳ ತಂದೆ ಈ ದಾವಾ ಆಸ್ತಿಯನ್ನು ದಿಃ 05-11-1952 ರಲ್ಲಿ ಖರೀದಿ ಮಾಡಿರುತ್ತಾರೆ. ಆ ಖರೀದಿ ಪತ್ರವನ್ನು ನಾನು ಓದಿ ತಿಳಿದು ಕೊಂಡಿರುತ್ತೇನೆ. ದಾವಾ ಆಸ್ತಿಯ ಪೂರ್ವ -ಪಶ್ಚಿಮ -54 ಅಡಿ, ಉತ್ತರ – ದಕ್ಷಿಣ -18 ಅಡಿ ಎಂದು ನಮಾದು ಆಗಿರುತ್ತದೆ . ಸದರಿ ವಿಸ್ತೀರ್ಣವನ್ನು ನಿಪಿ-2 ರಲ್ಲಿ ನಮೂದು ಮಾಡಿಲ್ಲ . ರಾಮಯ್ಯನವರು ಖರೀದಿಸಿದ ನಂತರ ದಾವಾ ಆಸ್ತಿಯನ್ನು ಪಂಚಾಯಿತಿಯಿಂದ 1980-81 ರಲ್ಲಿ ಅಳತೆ ಮಾಡಿಸಿರುತ್ತಾರೆ. ಆ ಬಗ್ಗೆ ದಾಖಲೆ ಇರುತ್ತದೆ. ಆ ದಾಖಲೆಯನ್ನು ನ್ಯಾಯಾಲಕ್ಕೆ ದಾಖಲೆ ಹಾಜರು ಮಾಡಿರುತ್ತಿರಾ ಎಂದರೆ ನನಗೆ ಈಗ ನೆನಪಿಲ್ಲ. ದಾವಾ ಆಸ್ತಿಯಲ್ಲಿ ಈ ಹಿಂದೆ ಇದ್ದ 18 ಅಂಕಣ ಮನೆಯು 1965 ರಲ್ಲಿ ರಾಮಯ್ಯನವರೇ ಕೆಡವಿ ಹಾಕಿರುತ್ತಾರೆ. ಸಾಕ್ಷಿಯು ಮುಂದುವರಿದು ಸದರಿ ಮನೆಯ ಶಿಥಿಲಗೊಂಡು ಬಂದಿರುತ್ತದೆ ಎಂದು ನುಡಿಯುತ್ತಾರೆ. ರಾಮಯ್ಯನವರು ದಾವಾ ಆಸ್ತಿಯನ್ನು ಖರೀದಿ ಮಾಡಿದ ನಂತರ ಅವರ ಹೆಸರಿನಲ್ಲಿಗೆ ಖಾತೆ ಬದಲಾವಣೆ ಆಗಿರುತ್ತದೆ. ಯಾವಾಗ ಖಾತೆ ಆಯಿತು ಎಂದು ನೆನಪಿಲ್ಲ. ರಾಮಯ್ಯನವರ ಹೆಸರಿಗೆ ಖಾತೆ ಆಗಿರುವುದನ್ನು ನಾನು ನೋಡಿರುತ್ತೇ. ಆ ಖಾತೆ - ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಮುಂದಿನ ಮುದ್ದತ್ತಿಗೆ ಹಾಜರು ಮಾಡುತ್ತೇನೆ. ಖಾತೆ ನಂ. 116 ಎಂದು ಇತ್ತು. ನಿಪಿ-2 ರಲ್ಲಿ ಪೂರ್ವಕ್ಕೆ -2-1/2( ಎರಡು ವರೆ ಅಡಿ) ಗಲ್ಲಿ, ಪಶ್ಚಿಮಕ್ಕೆ - ಖಾಲಿ ಜಾಗ ಮತ್ತು ಬಾವಿ, ಉತ್ತರಕ್ಕೆ - ಮೈಸೂರು ಹುಚ್ಚಯ್ಯನ ಅಲ್ಲಪಾಳು , ದಕ್ಷಿಣಕ್ಕೆ - ಎಲೆಯೂರು ಲಿಂಗೇಗೌಡನ ನಿವೇಶನ ಎಂದು ಚಕ್ಕು ಬಂದಿ ನಮೂದು ಆಗಿರುತ್ತದೆ.

ರಾಮಯ್ಯನವರು ಖರೀದಿ ಮಾಡಿದ ಜಮೀನಿನಲ್ಲಿ 1965 ನೇ ಇಸವಿಯಲ್ಲಿ ಫ್ಲೋರ್

ಮಿಲ್ ಮತ್ತು ಹಲ್ಲರ್ ನ್ನು ಹಾಕಿರುತ್ತಾರೆ. ರಾಮಯ್ಯನವರು ಸದರಿ ಫ್ಲೋರ್ ಮಿಲ್ ಮತ್ತು ಹಲ್ಲರ್ ನ್ನು ಹಾಕಲು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ಅನುಮತಿ ಪಡೆದಿದ್ದರೋ ಇಲ್ಲವೂ ನನಗೆ ನೆನಪಿಲ್ಲ. ಸದರಿ ಫ್ಲೋರ್ ಮಿಲ್ ಮತ್ತು ಹಲ್ಲರ್ ಗೆ ಇರುವ ವಿದ್ಯುತ್ ಬಿಲ್ ನಲ್ಲಿ ಯಾರ ಹೆಸರು ನಮೂದು ಇಲ್ಲ. ರಾಮಯ್ಯನವರು ವಿದ್ಯುತ್ ಪ್ರಸರಣ ನಿಗಮದಿಂದ ಅನುಮತಿ ಪಡೆದಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ರಾಮಯ್ಯನವರು ನಿಪಿ-2 ರ ಅಡಿಯಲ್ಲಿ ಖರೀದಿ ಮಾಡದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಫ್ಲೋರ್ ಮಿಲ್ ಮತ್ತು ಹಲ್ಲರ್ ನ್ನು ರಾಮಯ್ಯನವರು ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

1980-81 ರಲ್ಲಿ ಚಿಕ್ಕಲಿಂಗಯ್ಯನವರು ರಾಮಯ್ಯನವರ ಹೆಸರಿನಲ್ಲಿ ಇದ್ದ ದಾವಾ ಆಸ್ತಿಯನ್ನು ತಮ್ಮ ಹೆಸರಿಗೆ ಮಾಡಿಕೊಂಡಿರುತ್ತಾರೆ. ಆ ಸಮಯದಲ್ಲಿ ರಾಮಯ್ಯನವರ ಜೀವಂತ ಇದ್ದರು. ಈ ವಿಷಯ ಗೊತ್ತಾದಾಗ ರಾಮಯ್ಯನವರು ಎ.ಸಿ. ಗೆ ದೂರು ನೀಡಿರುತ್ತಾರೆ. ಸದರಿ ಖಾತೆ ಯನ್ನು ಪ್ರಶ್ನಿಸಿ ರಾಮಯ್ಯನವರು ಯಾವುದೇ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿಲ್ಲ. ಸಾಕ್ಷಿ ಮುಂದುವರಿದು ಎ.ಸಿ. ಗೆ ದೂರು ಕೊಟ್ಟಿದ್ದರು ಗ್ರಾಮ ಲೆಕ್ಕಾಧಿಕಾರಿ ಮರಿಕಾಮಯ್ಯನವರಿಗೆ ಶಿಕ್ಷೆ ಆಗಿರುತ್ತದೆ. ಚಿಕ್ಕಲಿಂಗಯ್ಯನವರ ಹೆಸರು ದಾವಾ ಆಸ್ತಿಯಲ್ಲಿ ಇರುವುದನ್ನು ರದ್ದು ಮಾಡಿಲ್ಲ. ಯಾವತ್ತು ರಾಮಯ್ಯನವರು ಚಿಕ್ಕಲಿಂಗಯ್ಯನವರಿಗೆ ಸ್ವಾದೀನವನ್ನು ನೀಡಿದರು ಎಂದರೆ ಸಾಕ್ಷಿಯು ಚಿಕ್ಕಲಿಂಗಯ್ಯನವರು ಅಕ್ರಮವಾಗಿ ದಾವಾ ಆಸ್ತಿಯಲ್ಲಿ 1996 ರಿಂದ ಸ್ವಾಧೀನದಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ.

ಈ ದಾವೆಯ ವಾದಿಗಳು ಈ ದಾವೆಯ ಪ್ರತಿವಾದಿಗಳ ವಿರುದ್ದ ಅಸಲು ದಾವೆ ಸಂಖ್ಯೆ 70/2009 ನ್ನು ಹೂಡಿದ್ದರು ಎಂದರೆ ಸರಿ. ಈ ದಾವೆಯ ಸಂಗತಿಗಳನ್ನು ನಾನು ಓದಿ ತಿಳಿದು ಕೊಂಡಿರುತ್ತೇನೆ. ವಾದಿಗಳು ವಾದ ಪತ್ರದಲ್ಲಿ ರಾಮಯ್ಯನವರು ಚಿಕ್ಕಲಿಂಗಯ್ಯನವರಿಗೆ ದಾವಾ ಆಸ್ತಿಯಲ್ಲಿ ಇರುವ ಫ್ಲೋರ್ ಮಿಲ್ ಮತ್ತು ಹಲ್ಲರ್ ನ್ನು ಬಿಟ್ಟು ಕೊಟ್ಟಿರುತ್ತಾರೆ ಎಂದು ಬರೆಸಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಓ ಎಸ್ 70/2009 ರಲ್ಲಿ ನಾನೇ ವಾದಿಗಳ ಪರ ಸಾಕ್ಷಿ ವಿಚಾರಣೆಗೆ ಬಂದಿದ್ದೆ. ಆ ಪ್ರಕರಣದಲ್ಲಿ ನಾನು ರಾಮಯ್ಯನವರು ಚಿಕ್ಕಲಿಂಗಯ್ಯನವರಿಗೆ ಫ್ಲೋರ್ ಮಿಲ್ ಮತ್ತು ಹಲ್ಲರ್ ನ್ನು ಬಾಡಿಗೆಗೆ ನೀಡಿದ್ದರು ಎಂದು ಹೇಳಿಕೆ ನೀಡಿದ್ದೇನೆಂದರ ಸರಿ. ಅದರಲ್ಲಿ 73500/- ರೂ ಬಾಡಿಗೆ ಬಾಕಿ ಇದೆ ಎಂದು ಹೇಳಿರುತ್ತೇನೆಂದರೆ ಸರಿ. ಸದರಿ ದಾವೆಯು ದಿಃ 17-06-2016 ರಲ್ಲಿ ವಜಾ ಆಗಿರುತ್ತದೆ

ಎಂದರೆ ಸರಿ. ಸದರಿ ಆದೇಶದ ವಿರುದ್ಧ ನಾವು ಮೇಲ್ಮನವಿ ಸಲ್ಲಿಸಿಲ್ಲ. 1978 ರಿಂದ 2007 ರ ವರೆಗೆ ಬಾಡಿಗೆ ಬಾಕಿ ಇತ್ತು. ಸದರಿ ಫ್ಲೋರ್ ಮಿಲ್ ಮತ್ತು ಹಲ್ಲರ್ ಚಾಲ್ತಿಯಲ್ಲಿ ಇಲ್ಲ. ಸದರಿ ಕಟ್ಟಡ ಇರುತ್ತದೆ. ಆದರೆ ಅದು ಶಿಥಿಲ ಗೊಂಡಿರುತ್ತದೆ. 21-06-1973 ರಲ್ಲಿ ಚಿಕ್ಕಲಿಂಗಯ್ಯನರಿಗೆ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯವರು ಲೈಸೆನ್ಸ್ ನೀಡಿದ್ದರು ಎಂದರೆ ಸಾಕ್ಷಿಯು ಅಕ್ರಮವಾಗಿ ತೆಗೆದು ಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಆಗಿನಿಂದಲೇ ಫ್ಲೋರ್ ಮಿಲ್ ಮತ್ತು ಹಲ್ಲರ್ ಚಾಲ್ತಿಯಾಗಿರುತ್ತದೆ ಎಂದರೆ ಸಾಕ್ಷಿಯು ಅಕ್ರಮವಾಗಿ ನಡೆಸುತ್ತಿದ್ದಾರೆ ಎಂದು ನುಡಿಯುತ್ತಾರೆ. ಚಿಕ್ಕಲಿಂಗಯ್ಯನವರು ವಿದ್ಯುತ್ ಸಂಪರ್ಕವನ್ನು ಪಡೆದಿರುತ್ತಾರೆ ಎಂದರೆ ಅಕ್ರಮವಾಗಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಚಿಕ್ಕಲಿಂಗಯ್ಯನವರಿಗೆ ನೀಡಲಾದ ಲೈಸೆನ್ಸ್ ಮತ್ತು ವಿದ್ಯುತ್ ಸಂಪರ್ಕವನ್ನು ರಾಮಯ್ಯನವರು ತಮ್ಮ ಜೀವನ ಅವಧಿಯಲ್ಲಿ ಪ್ರಶ್ನೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

**(ಮುಂದುವರಿದ ಪಾಟೀಸವಾಲಿಗೆ ವಕೀಲರು ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ. ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.